೪–೩೦ ಪಿ. ಎಂ.

ಶ್ರೀ ಎ. ಲಕ್ಷ್ಮೀಸಾಗರ್.—ಈ ತೀರ್ಮಾನವನ್ನು ಯಾವಾಗ ಜಾರಿಗೆ ಕೊಡುತ್ತೀರಿ ?

ಶ್ರೀ ವೈ. ರಾಮಕೃಷ್ಣ.—ಇದು ತಾ॥ ೧–೮–೧೯೮೨ ರಿಂದ ಜಾರಿಗೆ ಬರುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ.—ಈ ಕೆಲಸ ಅನೇಕ ವರ್ಷಗಳಿಂದ ಆಗಿರಲಿಲ್ಲ. ಈ ವೇತನ ಶ್ರೇಣಿಯನ್ನು ಇವರಿಗೆ ಕೊಡಲು ಕೆಲವರ ವಿರೋಧವಿದ್ದರೂ ಸಹ ಅದನ್ನು ಗಣನೆಗೆ ತಗೆದು ಕೊಳ್ಳದೆ ಗ್ರಾಮಾಂತರ ಪ್ರದೇಶಗಳ ರೈತರ ಹಿತದೃಷ್ಟಿಯಿಂದ ಹಾಗೂ ಜಾನುವಾರುಗಳ ಹಿತದೃಷ್ಟಿಯಿಂದ ಈ ಒಂದು ಉತ್ತಮವಾದ ಕಾರ್ಯವನ್ನು ಮಾಡಿದ್ದಾರೆ. ಆದ್ದರಿಂದ ಮುಖ್ಯ ಮಂತ್ರಿಗಳಾದ ಶ್ರೀ ಗುಂಡೂರಾವ್ ಅವರಿಗೆ, ಶ್ರೀ ವೈ. ರಾಮಕೃಷ್ಣ ಅವರಿಗೆ ಹಾಗೂ ಮಾನ್ಯ ವೀರಪ್ಪಮೊಯ್ಲಿ ಅವರಿಗೆ ಪಶುವೈದ್ಯಕೀಯ ಡಾಕ್ಟರ್‌ಗಳ ಪರವಾಗಿ ಮತ್ತು ಈ ರಾಜ್ಯದ ರೈತರ ಪರವಾಗಿ ಅಭಿನಂದಿಸುತ್ತೇನೆ,

ಶ್ರೀ ಎಸ್. ಆರ್. ಬೊಮ್ಮಾಯಿ.—ಇದೊಂದು ಸಂತೋಷದ ಸಂಗತಿ. ಮಾನ್ಯ ಮಂತ್ರಿಯವರು ಹುಸಿ ಭರವಸೆ ಕೂಡದೆ ಹಸಿ ಭರವಸೆ ಕೊಟ್ಟು ಇವರಿಗೆ ದೊಡ್ಡ ಉಪಕಾರ ಮಾಡಿದ್ದಾರೆ.

ಶ್ರೀ ಬಿ. ವಿ. ಕಕ್ಕಿಲಾಯ.—ಸರ್ಕಾರದವರು ಒಳ್ಳೆಯ ಕೆಲಸ ಮಾಡಿದ್ದಾರೆ. ಬಹಳ ಸಂತೋಷ. ಆದರೆ ನಮ್ಮ ಜಿಲ್ಲೆಯಲ್ಲಿ ಇನ್ನೂ.....

ಅಧ್ಯಕ್ಷರು.—ಅದನ್ನೆಲ್ಲಾ ಅವರು ತಮ್ಮ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ ಕೊಡುವಾಗ ಹೇಳುತ್ತಾರೆ.

ಶ್ರೀ ವೈ. ರಾಮಕೃಷ್ಣ.—ಈ ಇಲಾಖೆಯ ಸಮಗ್ರ ಪುನರ್ ಸಂಘಟನೆ ಮಾಡಬೇಕಾಗಿದೆ. ಅದನ್ನು ಯಾವ ರೀತಿ ಮಾಡಲಾಗುತ್ತದೆಂಬುದನ್ನು ನನ್ನ ಉತ್ತರದಲ್ಲಿ ಹೇಳುತ್ತೇನೆ.

Matter Under Rule 312

Re:—Delay in announcing results of VIII and IX Standard Examinations of Govt. High School at Kananur

ಶ್ರೀ ಎ. ಲಕ್ಷ್ಮೀಸಾಗರ್.— ಕೊಣನೂರಿನ ಪ್ರೌಢಶಾಲೆಯು ೮ ಮತ್ತು ೯ನೇ ತರಗತಿಗಳ ಪರೀಕ್ಷಾ ಫಲಿತಾಂಶವನ್ನು ಇಲ್ಲಿಯವರೆಗೆ ಪ್ರಕಟಣೆ ಮಾಡಿಲ್ಲ. ಇದಕ್ಕೆ ಮುಖ್ಯವಾದ ಕಾರಣವೆಂದರೆ, ಕನ್ನಡ, ಸಂಸ್ಕೃತ ಸಸ್ಯ ಶಾಸ್ತ್ರಗಳಿಗೆ ಸಂಬಂಧಪಟ್ಟಂತೆ ಈ ಶಾಲೆಯಲ್ಲಿ ಉಪಾಧ್ಯಾಯರುಗಳೇ ಇಲ್ಲದ ಕಾರಣ ಈ ವಿಷಯಗಳಿಗೆ ಸಂಬಂಧಪಟ್ಟಂತೆ ಪರೀಕ್ಷೆಗಳನ್ನೇ ಮಾಡಲಿಲ್ಲ. ಇದರಿಂದ ಸುಮಾರು ೫೦೦ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ತೊಂದರೆಯಾಗಿದೆ. ಇಂತಹ ಒಂದು ಅವ್ಯವಸ್ಥೆ ಆಲ್ಲಿ ಬರಬೇ ಕಾದರೆ ಸರ್ಕಾರದವರು ಆಲ್ಲಿಗೆ ಸಮಯಕ್ಕೆ ಸರಿಯಾಗಿ ಉಪಾಧ್ಯಾಯರುಗಳನ್ನು ನೇಮಕ ಮಾಡದೆ ವಿಳಂಬ ರೀತಿಯನ್ನು ಅನುಸರಿಸಿದ್ದೇ ಕಾರಣ, ಉಪಾಧ್ಯಾಯರುಗಳೇ ಇಲ್ಲದ ಕಾರಣ ಅಲ್ಲಿನ ವಿದ್ಯಾರ್ಥಿಗಳಿಗೆ ಸರಿಯಾಗಿ ತರಬೇತಿ ಮಾಡಲು ಸಾಧ್ಯವಾಗಲಿಲ್ಲ ಈ ಸಲದ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಈ ಶಾಲೆಗೆ ಸಂಬಂಧಪಟ್ಟಂತೆ ಶೇಕಡಾ ೬೦ ರಷ್ಟು ಫಲಿತಾಂಶ ಬಂದಿದೆ ಎಂದು ನನಗೆ ಸುದ್ದಿ ಬಂದಿದೆ: ಆದಕಾರಣ ೮ ಮತ್ತು ೯ನೇ ತರಗತಿಗಳಲ್ಲಿ ಯಾವ ಯಾವ ವಿಷಯಗಳಲ್ಲಿ ಪರೀಕ್ಷೆಗಳನ್ನು ಈ ಸಾಲಿನಲ್ಲಿ ನಡೆಸಿಲ್ಲವೋ ಆ ವಿಷಯಗಳಲ್ಲಿ ಕೂಡಲೇ ಪರೀಕ್ಷೆಗಳನ್ನ ನಡೆಸಿ ವಿದ್ಯಾರ್ಥಿಗಳು ಮುಂದಿನ ತರಗತಿಗಳಿಗೆ ಹೋಗುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀಮತಿ ನಾಗಮ್ಮ.—ಕೇಶವಮೂರ್ತಿ.—(ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು).

ಹಾಸನ ಜಿಲ್ಲಾ ಅರಕಲಗೂಡು ತಾಲ್ಲೂಕು ಕೊಣನೂರಿನಲ್ಲಿರುವ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರ ನಿರ್ಲಕ್ಷ್ಯತನದ ಕಾರಣ ೮ ಮತ್ತು ೯ನೇ ಇಯತ್ತೆಗಳ ವಾರ್ಷಿಕ ಪರೀಕ್ಷೆಯ ಫಲಿತಾಂಶಗಳನ್ನು ಪ್ರಕಟಿಸಲಾಗಲಿಲ್ಲವೆಂದು ವರದಿಯಾಗಿದೆ. ಈ ವಿಷಯ ತಿಳಿದ ಕೂಡಲೇ ಮೈಸೂರು ವಿಭಾಗದ ಸಹ ನಿರ್ದೇಶಕರು ಸದರಿ ಶಾಲೆಗೆ ೨–೭–೮೨ ರಂದು ಬೇಟಿಕೊಟ್ಟು ೮ ಮತ್ತು

ನೇ ಇಯತ್ತೆಗಳ ಫಲಿತಾಂಶಗಳನ್ನು ಪ್ರಕಟಿಸಲು ಏರ್ಪಾಡು ಮಾಡಿದರು. ಅದರಂತೆ ಫಲಿತಾಂಶ ಗಳನ್ನು ಪ್ರಕಟಿಸಲಾಯಿತು. ಹಿಂದಿನ ಮುಖ್ಯೋಪಾಧ್ಯಾಯರನ್ನು ಈ ನಿರ್ಲಕ್ಷ್ಯತನದ ಬಗ್ಗೆ ವಿಚಾರಣೆ ಕಾಯ್ದಿರಿಸಿ ವರ್ಗ ಮಾಡಲಾಗಿದೆ. ಅವರ ಬದಲು ಹೊಸ ಮುಖ್ಯೋಪಾಧ್ಯಾಯರು ಕೆಲಸದ ಮೇಲೆ ಹಾಜರಾಗಿದ್ದಾರೆ. ಅಧ್ಯಾಪಕರುಗಳ ವೇತನ ಪಾವತಿಗೆ ಮತ್ತು ಸಂಸ್ಕೃತ ಕನ್ನಡ ಹಾಗೂ ಜೀವ ಶಾಸ್ತ್ರಗಳ ಖಾಲಿಯಿದ್ದ ಉಪಾಧ್ಯಾಯರ ಹುದ್ದೆಗಳನ್ನು ಭರ್ತಿ ಮಾಡಲು ಏರ್ಪಾಡು ಮಾಡಲಾಗಿದ್ದು ಉಪಾಧ್ಯಾಯರುಗಳು ಈಗ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಈಗ ಆ ಶಾಲೆ ಯಲ್ಲಿ ಸಾಕಷ್ಟು ಉಪಾಧ್ಯಾಯರುಗಳಿದ್ದಾರೆ ಹಿಂದಿನ ಮುಖ್ಯೋಪಾಧ್ಯಾಯರ ವಿರುದ್ಧ ಕ್ರಮಕ್ಕೆಗೊಳ್ಳ ಲಾಗುತ್ತಿದೆ,

ಶ್ರೀ ಕೆ. ಬಿ. ಮಲ್ಲಪ್ಪ —ಅಲ್ಲಿನ ಮುಖ್ಯೋಪಾಧ್ಯಾಯರು ಸರಿಯಾಗಿ ಕೆಲಸ ಮಾಡದೆ ಅವರ ಒಂದು ನಿರ್ಲಕ್ಷ್ಯತನದಿಂದ ಈ ರೀತಿ ತೊಂದರೆಯಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ, ಆದರೆ ಇವರು ವಿದ್ಯಾ ಇಲಾಖೆಯ ಕಮೀಷನರ್ ಅವರಿಗೆ ಜಾಯಿಂಟ್ ಡೈರಕ್ಟರ್ ಅವರಿಗೆ ಜೀವಶಾಸ್ತ್ರ, ಗಣಿತ ಸಂಸ್ಕೃತ ಹಾಗೂ ಕನ್ನಡದ ವಿಷಯಗಳನ್ನು ಹೇಳಿಕೊಡಲು ಉಪಾಧ್ಯಾಯರುಗಳು ಇಲ್ಲದ ಕಾರಣ ಕೂಡಲೇ ಈ ಜಾಗಗಳನ್ನು ಭರ್ತಿ ಮಾಡಬೇಕೆಂದು ತಿಂಗಳಿಗೆ ಎರಡರಂತೆ ಸಂಮಾರು ೧೩ ಕಾಗದಗಳನ್ನು ಬರೆದರೂ ಸಹ ಈ ಅಧಿಕಾರಿಗಳು ಇದರ ಬಗ್ಗೆ ನಿಗಾ ಕೊಡಲಿಲ್ಲ ಈ ಕಾಗದಗಳ ಕಾಪಿ ನನ್ನ ಹತ್ತಿರವೂ ಇದೆ. ಈಗ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಫಲಿತಾಂಶವನ್ನು ಪ್ರಕಟ ಮಾಡಲಾಯಿತೆಂದು ಹೇಳಿದರು. ಪರೀಕ್ಷೆಯನ್ನೇ ನಡೆಸದೆ ಫಲಿತಾಂಶವನ್ನು ಯಾವ ರೀತಿ ಪ್ರಕಟ ಮಾಡಲಾಯಿತು ? ಎಲ್ಲರಿಗೂ ಎಗ್ಜಮ್‌ಪನ್ ಏನಾದರೂ ಕೊಡಲಾಯಿತೇ ಹೇಗೆ ? ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಈಗಾಗಲೇ ಹೇಳಿದಂತೆ ತಡೆಹಿಡಿಯಲಾಗಿದ್ದ ಫಲಿ ತಾಂಶವನ್ನು ಪ್ರಕಟ ಮಾಡಿದ್ದಾರೆ. ಈ ತರಗತಿಗಳಲ್ಲಿದ್ದ ಮಕ್ಕಳಿಗೆ ಮುಂದಿನ ತರಗತಿಗಳಿಗೆ ಹೋಗು ವುದಕ್ಕೆ ಏರ್ಪಾಡು ಮಾಡಲಾಗಿದೆ. ಅಲ್ಲಿನ ಮಕ್ಕಳಿಗೆ ಇಷ್ಟೆಲ್ಲಾ ತೊಂದರೆಯಾಗಲು ಕಾರಣವೇನೆಂದರೆ, ಅಲ್ಲಿದ್ದ ಹೆಡ್–ಮಾಸ್ಟರ್ ಅವರನ್ನು ಕಳೆದ ಡಿಸೆಂಬರ್ ತಿಂಗಳಲ್ಲಿ ವರ್ಗ ಮಾಡಿದಾಗ ಮತ್ತು ಅವರ ಜಾಗಕ್ಕೆ ಹೋದಂಥ ಬೇರೆ ಹೆಡ್–ಮಾಸ್ಟರಿಗೆ ಚಾರ್ಜ್ ಕೊಡದೇ ಅದೇ ಹುದ್ದೆಯಲ್ಲಿ ಮುಂದುವ ರೆದರು. ಬೇರೆಯವರಿಗೆ ಚಾರ್ಜ್ ಕೊಡಬೇಕೆಂದು ಪತ್ರಗಳನ್ನು ಬರೆದರೂ ಸಹ ಅವರು ಅದರಂತೆ ನಡೆದುಕೊಳ್ಳಲಿಲ್ಲ. ಹೀಗಾಗಿ ಅವರನ್ನು ಸಸ್ಪೆಂಡ್ ಮಾಡಲಾಯಿತು. ನಂತರ ಅವರು ಹೈಕೋರ್ಟಿಗೆ ಹೋಗಿ ಸ್ಟೇ ತಂದರು. ಇಷ್ಟೆಲ್ಲಾ ಆದಮೇಲೆ ತಾ॥ ೨–೭–೧೯೮೨ ರಲ್ಲಿ ಅಲ್ಲಿಗೆ ಬೇರೆ ಒಬ್ಬರನ್ನು ಪೋಸ್ಟ್ ಮಾಡಿ ಬಲವಂತವಾಗಿ ಚಾರ್ಜ್ ಕೊಡುವುದಕ್ಕೆ ಏರ್ಪಾಡು ಮಾಡಲಾಗಿದೆ ಮತ್ತು ಇನ್ನಿತರ ಖಾಲಿ ಇದ್ದ ಹುದ್ದೆಗಳನ್ನು ಸಹ ಭರ್ತಿ ಮಾಡಿದ್ದೇವೆ.

FINANCIAL BUSINESS

re: Discussion and Voting af Demands for Grants for 1982–83 Demand Nos. 4,35 and 36.

ಶ್ರೀ ಬಿ. ಬಸವಲಿಂಗಪ್ಪ. (ಯಲಹಂಕ).—ಮಾನ್ಯ ಅಧ್ಯಕ್ಷರೇ, ಈ ಕಾನೂನು ಇಲಾಖೆಯ ಬೇಡಿಕೆಯ ಚರ್ಚೆಯಲ್ಲಿ ಭಾಗವಹಿಸಿ ಈ ಬಗ್ಗೆ ಒಂದೆರಡು ವಿಷಯಗಳನ್ನು ಮಾತನಾಡಬೇಕೆಂದು ನಾನು ಎದ್ದು ನಿಂತಿದ್ದೇನೆ. ೧೯೮೧–೮೨ರ ವಾರ್ಷಿಕ ವರದಿಯ ಕೊನೇ ಪ್ಯಾರಾದಲ್ಲಿ ಮಾನ್ಯ ಮಂತ್ರಿ ಯವರು ಈ ಭೂ ಸುಧಾರಣೆ ಸೆಲ್ ಬಗ್ಗೆ ಪ್ರಸ್ತಾಪ ಮಾತಾಡ್ದಾರೆ. ಹಾಗೆ ಪ್ರಸ್ತಾಪ ಮಾಡಿರುವ ಪ್ರಕಾರ ಲೀಗಲ್ ಏಡ್‌ನವರು ೫೯೪೨ ಜನಗಳಿಗೆ ಸಹಾಯ ಮಾಡಿದ್ದಾರೆ. ಎಂದು ಹೇಳಿದ್ದಾರೆ ಹೈಕೋರ್ಟ್‌ನಲ್ಲಿ ಈ ಬಗ್ಗೆ ೪೧೨ ಜನರ ಕೇಸ್‌ಗಳು ಮಾತ್ರ ತೀರ್ಮಾನವಾಗಿವೆ. ಆದರಲ್ಲಿ ೩೮೨ ಕೇಸುಗಳು ರಿಮೈಂಡ್ ಆಗಿವೆ ಇದರಲ್ಲಿ ಟಿನೆಂಟ್ಸ್ ಪರವಾಗಿ ತೀರ್ಮಾನವಾಗಿರತಕ್ಕಂಥಾದ್ದು ಕೇವಲ ೧೪ ಕೇಸಸ್ ಮಾತ್ರ. ಈ ಭೂ ಸುಧಾರಣೆ ಕಾನೂನು ಪ್ರಕಾರ ಹೈಕೋರ್ಟ್‌ನಲ್ಲಿ ಈಗ ಸುಮಾರು ೩೦ ಸಾವಿರ ಕೇಸುಗಳು ಇವೆ. ಟ್ರಿಬ್ಯೂನಲ್‌ನವರು ಈ ಭೂಸುಧಾರಣೆ ಬಗ್ಗೆ ಏನು ತೀರ್ಮಾನ ಕೊಡುತ್ತಾರೆ ಅದರ ಮೇಲೆ ಹೈಕೋರ್ಟ್‌ನವರು ಅದರ ವಿರೋಧವಾಗಿಯೋ ಅಥವಾ ಪರವಾಗಿಯೋ